**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 44 ಗ್ರಾಪಸ 2015(ಪಿ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:.31-05-2017

**ಇವರಿಂದ:**

**ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್),**
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

**ಇವರಿಗೆ:**

1. **ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,**
ಎಲ್ಲಾ ಜಿಲ್ಲಾ ಪಂಚಾಯತಿಗಳು.
2. **ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು,**
(ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ),
**ಎಲ್ಲಾ ತಾಲ್ಲೂಕು ಪಂಚಾಯತಿಗಳು,**
3. **ರಾಜ್ಯದ ಎಲ್ಲಾ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು,**
(ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ),
**ಎಲ್ಲಾ ಗ್ರಾಮ ಪಂಚಾಯತಿಗಳು.**

ಮಾನ್ಯರೆ,

**ವಿಷಯ:** 14ನೇ ಹಣಕಾಸು ಆಯೋಗದಡಿ ಬಿಡುಗಡೆ ಮಾಡಲಾದ ಅನುದಾನಕ್ಕೆ ಹಣಬಳಕೆ ಪ್ರಮಾಣ ಪತ್ರಗಳನ್ನು ಒದಗಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 44 ಗ್ರಾಪಸ 2015, ದಿನಾಂಕ:19-08-2015.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 44 ಗ್ರಾಪಸ 2015, ದಿನಾಂಕ:29-02-2016.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 44 ಗ್ರಾಪಸ 2015, ದಿನಾಂಕ:31-03-2016.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 35 ಗ್ರಾಪಸ 2016, ದಿನಾಂಕ:29-07-2016.
5. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 35 ಗ್ರಾಪಸ 2016(ಪಿ-1), ದಿನಾಂಕ:15-11-2016.
6. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 03 ಗ್ರಾಪಸ 2017, ದಿನಾಂಕ:24-01-2017.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ಹಾಗೂ (2)ರ ಆದೇಶಗಳ ಮೂಲಕ 2015-16ನೇ ಸಾಲಿನ 1ನೇ ಕಂತಿನ ಸಾಮಾನ್ಯ ಮೂಲ ಅನುದಾನ ರೂ.501.43 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ಉಲ್ಲೇಖ(3)ರ ಆದೇಶದ ಮೂಲಕ 2015-16ನೇ ಸಾಲಿನ 2ನೇ ಕಂತಿನ ಸಾಮಾನ್ಯ ಮೂಲ ಅನುದಾನ ರೂ.470.93 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ಉಲ್ಲೇಖ(4)ರ ಆದೇಶದ ಮೂಲಕ 2016-17ನೇ ಸಾಲಿನ 1ನೇ ಕಂತಿನ ಸಾಮಾನ್ಯ ಮೂಲ ಅನುದಾನ ರೂ.684.16 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ಉಲ್ಲೇಖ(5)ರ ಆದೇಶದ ಮೂಲಕ 2016-17ನೇ ಸಾಲಿನ 2ನೇ ಕಂತಿನ ಸಾಮಾನ್ಯ ಮೂಲ ಅನುದಾನ ರೂ.684.05 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ ಹಾಗೂ ಉಲ್ಲೇಖ(6)ರ ಆದೇಶದ ಮೂಲಕ 2016-17ನೇ ಸಾಲಿನ ಕಾರ್ಯಕ್ಷಮತೆ ಅನುದಾನ ರೂ.179.46 ಕೋಟಿಗಳನ್ನು ರಾಜ್ಯದ 3809 ಅರ್ಹ ಗ್ರಾಮ ಪಂಚಾಯತಿಗಳಿಗೆ ಮಾತ್ರ ಬಿಡುಗಡೆಗೊಳಿಸಲಾಗಿದೆ. ಸದರಿ ಬಿಡುಗಡೆಗೊಳಿಸಲಾದ ಅನುದಾನಗಳ ಸರ್ಕಾರದ ಆದೇಶಗಳು ಹಾಗೂ ಗ್ರಾಮ ಪಂಚಾಯತಿವಾರು ತಃಖ್ತೆಯನ್ನು rdpr.kar.nic.in ಎಂಬ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿರುತ್ತದೆ.

ಮೇಲೆ ತಿಳಿಸಿದಂತೆ 14ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ಆಯಾ ಆರ್ಥಿಕ ವರ್ಷದಲ್ಲಿ ಭಾರತ ಸರ್ಕಾರವು 14ನೇ ಹಣಕಾಸು ಆಯೋಗ ಅನುದಾನವನ್ನು ರಾಜ್ಯ ಸರ್ಕಾರಕ್ಕೆ ಬಿಡುಗಡೆಗೊಳಿಸಿರುವುದನ್ನು ನೇರವಾಗಿ ಆಯಾ ಗ್ರಾಮ ಪಂಚಾಯತಿಗಳಿಗೆ ನಿಗಧಿತ ಸಮಯದಲ್ಲಿ ಬಿಡುಗಡೆಗೊಳಿಸಲಾಗಿದೆ. ಬಿಡುಗಡೆಗೊಳಿಸಲಾದ ಈ ಅನುದಾನಗಳಿಗೆ ಆಯಾ ಗ್ರಾಮ ಪಂಚಾಯತಿಗಳಿಂದ ನಿಗಧಿತ ನಮೂನೆ GFR 19-A ರಲ್ಲಿ ಹಣಬಳಕೆ ಪ್ರಮಾಣ ಪತ್ರಗಳನ್ನು ಶೀಘ್ರವಾಗಿ ಪಡೆದುಕೊಂಡು ಜಿಲ್ಲಾ ಮಟ್ಟದಲ್ಲಿ ಕ್ರೋಢೀಕರಿಸಿ, ರಾಜ್ಯ ಸರ್ಕಾರಕ್ಕೆ ಕಡ್ಡಾಯವಾಗಿ ಕಳುಹಿಸಿಕೊಡುವುದು. ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದ ಪ್ರಕಾರ 2015-16ನೇ ಸಾಲಿನಿಂದ 2016-17ನೇ ಸಾಲಿನವರೆಗೆ ರಾಜ್ಯದ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸಲಾಗಿರುವ ಅನುದಾನದಲ್ಲಿ ಯಾವುದಾದರೂ ಗ್ರಾಮ ಪಂಚಾಯತಿಗಳಿಗೆ ಅನುದಾನವು ಜಮೆಯಾಗಿರದೇ ಇದ್ದರೆ ಸಂಬಂಧಿಸಿದ ಗ್ರಾಮ ಪಂಚಾಯತಿಗಳ 14ನೇ ಹಣಕಾಸು ಆಯೋಗ ಅನುದಾನದ ಉಳಿತಾಯ ಖಾತೆಯ ದೃಢೀಕೃತ ನಕಲು ಪ್ರತಿಗಳು ಹಾಗೂ ಸದರಿ ಅನುಬಂಧವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ದೃಢೀಕರಿಸಿ ಕಳುಹಿಸಿಕೊಡುವಂತೆ ತಮ್ಮನ್ನು ಕೋರಲು ನಾನು ನಿರ್ದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,
31/5/2017
(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
31.05.17

# ಅನುಬಂಧ

ಜಿಲ್ಲೆಯ ಹೆಸರು:

| ಕ್ರಸಂ | ತಾಲ್ಲೂಕಿನ ಹೆಸರು ಮತ್ತು ಗ್ರಾಮ ಪಂಚಾಯತಿ ಹೆಸರು | 2015-16ನೇ ಸಾಲಿನ 1ನೇ ಕಂತಿನ ಸಾಮಾನ್ಯ ಮೂಲ ಅನುದಾನ ಜಮೆಯಾಗಿರುವ ವಿವರ | | 2015-16ನೇ ಸಾಲಿನ 2ನೇ ಕಂತಿನ ಸಾಮಾನ್ಯ ಮೂಲ ಅನುದಾನ ಜಮೆಯಾಗಿರುವ ವಿವರ | | 2016-17ನೇ ಸಾಲಿನ 1ನೇ ಕಂತಿನ ಸಾಮಾನ್ಯ ಮೂಲ ಅನುದಾನ ಜಮೆಯಾಗಿರುವ ವಿವರ | | 2016-17ನೇ ಸಾಲಿನ 2ನೇ ಕಂತಿನ ಸಾಮಾನ್ಯ ಮೂಲ ಅನುದಾನ ಜಮೆಯಾಗಿರುವ ವಿವರ | | 2016-17ನೇ ಸಾಲಿನ ಕಾರ್ಯಕ್ಷಮತೆ ಅನುದಾನ ಜಮೆಯಾಗಿರುವ ವಿವರ | |
|---|---|---|---|---|---|---|---|---|---|---|---|
| | | ಹೌದು | ಇಲ್ಲ | ಹೌದು | ಇಲ್ಲ | ಹೌದು | ಇಲ್ಲ | ಹೌದು | ಇಲ್ಲ | ಹೌದು | ಇಲ್ಲ |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |
| | | | | | | | | | | | |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
--------- ಜಿಲ್ಲಾ ಪಂಚಾಯತ್

Su(M)kan.AnnexueRDP 44 GPS 2015(P)